

# ಸೂಪರ್ ಶಿಕ್ಷಣ

ಪ್ರಜಾಕೀಯ

UPP

UTTAMA PRAJAAKEEYA PARTY

www.prajaakeeya.org

FOR MORE INFORMATION CONTACT US & JOIN US ON SOCIAL MEDIA PLATFORMS

NIMMAUPENDRA
NIMMAUPENDRA
NIMMAUPENDRA

NIMMAUPENDRA
PRAJAAKEEYA
PRAJAAKEEYA

+91 9845 396 204 | 804
prajaakeeyainfo@gmail.com
www.prajaakeeya.org

## 2017-2018 ರ ಪ್ರಾಥಮಿಕ, ಮಾಧ್ಯಮಿಕ ಹಾಗೂ ಉನ್ನತ ಶಿಕ್ಷಣಕ್ಕೆ ಮೀಸಲಿಟ್ಟ ರಾಜ್ಯ ಬಜೆಟ್: 22,662 ಕೋಟಿ ರೂಪಾಯಿಗಳು (ಆಧಾರದ ಮೇಲೆ)

- ಇನೊವೇಟೀವ್ ಮಾಡರ್ನ್ ಎಜುಕೇಶನ್ ಸಿಸ್ಟಮ್ (ಐ.ಎಮ್.ಇ.ಎಸ್) ಸರಳ, ವೈವಿಧ್ಯಮಯ, ಒತ್ತಡರಹಿತ, ಮಗುವಿನ ಜೀವನಕ್ಕೆ ಉಪಯೋಗವಾಗುವ ಮತ್ತು ಅಳವಡಿಸಿಕೊಳ್ಳುವಂತಹ ಶಿಕ್ಷಣ ವ್ಯವಸ್ಥೆ ಜಾರಿಗೆ ತರಲಾಗುವುದು.

- ಮಗುವಿಗೆ ಆರು ವರ್ಷವಾಗುವವರೆಗೂ ಅಂಗನವಾಡಿ ಹಾಗೂ ಶಿಶುವಿಹಾರ (ಕಿಂಡರ್ ಗಾರ್ಡನ್) ಕಡ್ಡಾಯವಿರುವುದಿಲ್ಲ. ಮಕ್ಕಳು ತಂದೆ-ತಾಯಂದಿರ ಜೊತೆಗೆ ತಮ್ಮ ಜೀವನದ ಅಮೂಲ್ಯವಾದ ಬಾಲ್ಯವನ್ನು ಕಳೆಯಲು, ಕಲಿಯಲು ಮತ್ತು ಅನುಬಂಧ ಭಾಂಧವ್ಯ ಬೆಳೆಸಿಕೊಳ್ಳಲು ಅನುಕೂಲವಾಗುತ್ತದೆ. (ತಂದೆ-ತಾಯಿ ಇಬ್ಬರೂ ಉದ್ಯೋಗಕ್ಕೆ ಹೋಗುವವರಾಗಿದ್ದರೆ ಅಥವಾ ಅವರ ಆಯ್ಕೆಯ ಮೇರೆಗೆ ಅಂಗನವಾಡಿ ಹಾಗೂ ಶಿಶುವಿಹಾರಗಳಿಗೆ ಮಕ್ಕಳನ್ನು ಕಳುಹಿಸಬಹುದಾಗಿದೆ)

- ಎಲ್ಲಾ ಸರ್ಕಾರೀ ಶಾಲೆಯ ಹಾಗೂ ಅಂಗನವಾಡಿಯ ಮಕ್ಕಳು ಹಾಗೂ ಶಿಕ್ಷಕರಿಗೆ ಉಚಿತ ಸಾರಿಗೆ ಸೌಲಭ್ಯಗಳನ್ನು ನೀಡಲಾಗುತ್ತದೆ. ಎಲ್ಲಾ ಸರ್ಕಾರೀ ಶಾಲಾ ಕಾಲೇಜುಗಳ ಹಾಗೂ ಅಂಗನವಾಡಿಗಳ ಮೂಲಸೌಕರ್ಯಗಳು ಮತ್ತು ಸೌಲಭ್ಯಗಳನ್ನು ಉತ್ಕೃಷ್ಟ ಗುಣಮಾಟ್ಟಕ್ಕೆ ಏರಿಕೆ (ಅಪ್‌ಗ್ರೇಡ್) ಮಾಡಲಾಗುವುದು. (ಉದಾ: ಕೇಂದ್ರೀಯ ವಿದ್ಯಾಲಯದ ಮಾದರಿಯಲ್ಲಿ)

- ಒಂದನೇ ಮತ್ತು ಎರಡನೇ ತರಗತಿಯ ಶಾಲೆಯ ಮಕ್ಕಳಿಗೆ ಯಾವುದೇ ಬರೆಯುವುದು, ಓದುವುದು ಇರದೇ ಬರೀ ಆಟ, ಬೇರೆ ಮಕ್ಕಳ ಜೊತೆ ಬೆರೆಯುವುದು ಮತ್ತು ಶಾಲೆಗೆ ಹೊಂದಿಕೊಳ್ಳುವಂತೆ ಆಸಕ್ತಿ ಬೆಳೆಸಿಕೊಳ್ಳವಂತಹ

ಮುಕ್ತವಾದ ವಾತಾವರಣವಿದ್ದು ಶಿಕ್ಷಕರ ಮೇಲ್ವಿಚಾರಣೆ ಹಾಗು ಕಣ್ಗಾವಲಿನಲ್ಲಿ ಮಕ್ಕಳು ಇರುತ್ತಾರೆ.

- ಸಾಮಾನ್ಯಜ್ಞಾನದ ಅಭಿವೃದ್ಧಿಗಾಗಿ ಪ್ರಾಣಿ–ಪಕ್ಷಿ, ಗಿಡ–ಮರ, ಹೂವು–ಹಣ್ಣು, ತಿಂಡಿ–ತಿನಿಸು ಇತ್ಯಾದಿಗಳ ಪರಿಚಯ ಮಾಡಿಕೊಡಲಾಗುವುದು. ಯಾವುದೇ ಬಲವಂತದ ಶಿಕ್ಷಣ ಇರುವುದಿಲ್ಲ. ಮಕ್ಕಳಿಗೆ ನೈತಿಕ ಶಿಕ್ಷಣವನ್ನು ಪರಿಚಯಿಸಲಾಗುವುದು. (ಉದಾ: ನಡವಳಿಕೆ, ಶುಚಿತ್ವ, ಸ್ವಂತಿಕೆ ಬಗೆಗಿನ ಕೌಶಲ್ಯಗಳು, ಮನೆ–ಶಾಲೆ–ಪರಿಸರದ ಬಗೆಗಿನ ಕಾಳಜಿ ಹಾಗೂ ಸ್ವಚ್ಛತೆ) ಇದರಿಂದಾಗಿ ಮಕ್ಕಳು ಹೆಚ್ಚು ಸೃಜನಾತ್ಮಕವಾಗಿ ಕೌಶಲ್ಯವನ್ನು ರೂಡಿಸಿಕೊಳ್ಳುತ್ತಾರೆ.

- ಎಲ್ಲಾ ಸರ್ಕಾರೀ ಶಾಲೆಯ ಮಕ್ಕಳಿಗೆ ಮೂರನೇ ತರಗತಿಯಿಂದ ನೋಟ್‌ಬುಕ್ ಸೆಟ್ ಜೊತೆಗೆ ಎಲೆಕ್ಟ್ರಾನಿಕ್ ಟ್ಯಾಬ್ಲೆಟ್‌ಗಳನ್ನು (ಮಿನಿ ಕಂಪ್ಯೂಟರ್) ನೀಡಲಾಗುವುದು ದೃಶ್ಯ ಹಾಗೂ ಧ್ವನಿಗಳೊಂದಿಗೆ ಶಿಕ್ಷಣ ಕಲಿಸುವ (ಆಡಿಯೋ & ವೀಡಿಯೋ ಸ್ಮಾರ್ಟ್‌ಕ್ಲಾಸ್) ವ್ಯವಸ್ಥೆಯಿರುತ್ತದೆ, ಕನ್ನಡ, ಇಂಗ್ಲೀಷ್ ಮತ್ತು ಮೂರನೇ ಭಾಷೆಯನ್ನು ಸರಳ ವ್ಯಾಕರಣದೊಂದಿಗೆ ಓದುವುದು, ಬರೆಯುವುದು ಹಾಗೂ ಮಾತನಾಡುವುದನ್ನು ಕಲಿಸಲಾಗುವುದು.

- ಈ ಟ್ಯಾಬ್ಲೆಟ್‌ಗಳಲ್ಲಿ ಸಾಮಾನ್ಯ ಜ್ಞಾನ, ಸಮಾಜ ಶಾಸ್ತ್ರ, ಗಣಿತ, ವಿಜ್ಞಾನವನ್ನು ಜೀವನಕ್ಕೆ ಉಪಯೋಗವಾಗುವ ಮತ್ತು ಅಳವಡಿಸಿಕೊಳ್ಳುವಂತಹ ಎಲ್ಲಾ ವಿಷಯಗಳನ್ನು ದೃಶ್ಯ ಹಾಗೂ ಧ್ವನಿ ಮಾಧ್ಯಮಗಳಿಂದ ಟ್ಯಾಬ್ಲೆಟ್ನೊಳಗೆ ಅಳವಡಿಸಿ ಮಕ್ಕಳಿಗೆ ಆಕರ್ಷಕ ರೀತಿಯಲ್ಲಿ ಕಲಿಸಿಕೊಡಲಾಗುವುದು. ಈ ಟ್ಯಾಬ್ಲೆಟ್‌ಗಳಲ್ಲಿ ಹತ್ತನೇ ತರಗತಿಯವರೆಗಿನ ಎಲ್ಲಾ ಪಠ್ಯಕ್ರಮಗಳು ಹಾಗೂ ಪಾಠಗಳನ್ನು ಅಳವಡಿಸಿರಲಾಗುತ್ತದೆ.

- ಟ್ಯಾಬ್ಲೆಟ್‌ಗಳಲ್ಲಿ ಕಾರ್ಟೂನ್, ಆಟಗಳು, ವೇದಿಕ್ ಗಣಿತ–ವಿಜ್ಞಾನ, ಕ್ವಿಝ್, ಕಥೆಗಳು, ನೀತಿ ಪಾಠಗಳು, ಪ್ರಯೋಗಗಳು, ಅನಿಮೇಷನ್

ಇತ್ಯಾದಿಗಳನ್ನು ದೃಶ್ಯ ಹಾಗೂ ಧ್ವನಿ ಮಾಧ್ಯಮಗಳಿಂದ ವೈವಿಧ್ಯಮಯ ಹಾಗೂ ಆಕರ್ಷಕ ರೀತಿಯಲ್ಲಿ ಅಳವಡಿಸಲಾಗಿರುವುದು. ಇದರಿಂದಾಗಿ ಮಕ್ಕಳಿಗೆ ವಸ್ತು ವಿಶೇಷತೆಗಳನ್ನು ಆಸಕ್ತಿದಾಯಕವಾಗಿ ಕಲಿಯುವುದಕ್ಕೆ ಮತ್ತು ನೆನಪಿನಲ್ಲಿಟ್ಟುಕೊಳ್ಳುವದಕ್ಕೆ ಸಹಾಯವಾಗುತ್ತದೆ.

- ಈ ಟ್ಯಾಬ್ಲೆಟ್‌ಗಳ ಮೂಲಕ ಮಕ್ಕಳಿಗೆ ಒಂದರಿಂದ ಹತ್ತನೇ ತರಗತಿಯವರೆಗೆ ಸುಲಭವಾಗಿ ಮನೆಯಲ್ಲಿಯೇ ಕಲಿಸಬಹುದಾಗಿರುವುದರಿಂದ ಮನೆ ಕಲಿಕೆ (ಹೋಮ್ ಸ್ಕೂಲಿಂಗ್) ವ್ಯವಸ್ಥೆಯನ್ನು ಪ್ರೋತ್ಸಾಹ ಧನ ನೀಡುವುದರ ಮೂಲಕ ಉತ್ತೇಜಿಸಲಾಗುವುದು. (ಮನೆಯಲ್ಲಿಯೇ ಕಲಿಯಲು ಬಯಸುವ ಮಕ್ಕಳಿಗೂ ಈ ಟ್ಯಾಬ್ಲೆಟ್‌ಗಳನ್ನು ಸರ್ಕಾರದ ವತಿಯಿಂದ ಉಚಿತವಾಗಿ ನೀಡಲಾಗುವುದು.) ಮತ್ತು ಸರ್ಕಾರದಿಂದ ನೇಮಿಸಲ್ಪಟ್ಟ ಶಿಕ್ಷಕರಿಂದ ಸಲಹೆ ಪಡೆಯುವ ವ್ಯವಸ್ಥೆಯನ್ನು ಕಲ್ಪಿಸಲಾಗುತ್ತದೆ.

- ಸುಮಾರು 52 ಲಕ್ಷ ವಿದ್ಯಾರ್ಥಿಗಳಿಗೆ ಅಂದಾಜು 2600 ಕೋಟಿ ರೂಪಾಯಿಗಳನ್ನು ಸರ್ಕಾರವು ಟ್ಯಾಬ್ಲೆಟ್‌ಗಳ ಖರೀದಿಗಾಗಿ ನೀಡಲಾಗುತ್ತದೆ.

- ಪೋಷಕರ ಮನಸ್ಥಿತಿಗೆ ಹಾಗೂ ಅನುಕೂಲಕ್ಕೆ ಅನುಗುಣವಾಗಿ ತಮ್ಮ ಮಕ್ಕಳನ್ನು ಶಾಲೆಗೆ/ ಮನೆಯಲ್ಲಿಯೇ ಕಲಿಕೆ/ ಮನೆಯಿಂದಲೇ ಆನ್‌ಲೈನ್ ಶಾಲೆಗೆ ಅವಕಾಶವಿರುತ್ತದೆ.

- 6, 7, 8 ನೇ ತರಗತಿಯ ಮಕ್ಕಳಿಗೆ ಮೂಲ ಸರಳ ಶಿಕ್ಷಣದೊಂದಿಗೆ ಕೌಶಲ್ಯಾಧಾರೀತ ಪ್ರಾಯೋಗಿಕ ಶಿಕ್ಷಣವನ್ನು (ಪ್ರಾಜೆಕ್ಟ್ ವರ್ಕ್) ನೀಡಲಾಗುವುದು. ಇದರಿಂದ ಪ್ರತಿದಿನದ ಚಟುವಟಿಕೆಗಳಾದ ಬ್ಯಾಂಕಿಂಗ್, ಶಾಪಿಂಗ್, ಸಂಚಾರ ಪ್ರಜ್ಞೆ, ಅಡಿಗೆ, ತೋಟಗಾರಿಕೆ, ಕೃಷಿ, ನೈರ್ಮಲ್ಯ, ಐಟಿ ಮತ್ತು ತಾಂತ್ರಿಕ ಕೌಶಲ್ಯಗಳು, ಕ್ರೀಡೆಗಳು, ಸಂಗೀತ, ಸಾಂಸ್ಕೃತಿಕ ಚಟುವಟಿಕೆಗಳು, ಹಾಸ್ಪಿಟಾಲಿಟಿ ಜೊತೆಗೆ ಅವರ ತಂದೆ-ತಾಯಿಯರ ವೃತ್ತಿಗಳ

ಬಗ್ಗೆ ಮಾಹಿತಿಯನ್ನು ಮಕ್ಕಳು ಪಡೆಯುತ್ತಾರೆ. ಇದು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪ್ರೋತ್ಸಾಹಿಸುವಂತಹ ಶಿಕ್ಷಣವಾಗಿರುತ್ತದೆ.

- ಮಗುವಿನ ಮೌಲ್ಯಮಾಪನವನ್ನು ಆರು ತಿಂಗಳಿಗೊಮ್ಮೆ ಮಾಡಲಾಗುತ್ತದೆ. ಆನ್‌ಲೈನ್ ಸ್ಕೂಲ್ ಮತ್ತು ಮನೆಕಲಿಕೆ (ಹೋಂ ಸ್ಕೂಲ್) ವಿದ್ಯಾರ್ಥಿಗಳು ತಿಂಗಳಿಗೊಮ್ಮೆ ಮೌಲ್ಯಮಾಪನಕ್ಕೆ ಪೋಷಕರ ಇಚ್ಚೆಗೆ ಅನುಗುಣವಾಗಿ ಒಳಪಡಬಹುದಾಗಿದೆ.

- ಪ್ರಾಥಮಿಕ ಹಂತದ ಶಿಕ್ಷಣವು ಭಾಷಾ ವಿಷಯಗಳನ್ನು ಹೊರತುಪಡಿಸಿ ಲಿಖಿತ ಪರೀಕ್ಷೆಗಳಿಂದ ಮುಕ್ತವಾಗಿರುತ್ತದೆ. ಮಕ್ಕಳಲ್ಲಿ ಗ್ರಹಿಸುವಿಕೆ, ತರ್ಕ, ಸೃಜನಶೀಲತೆ, ಪ್ರಯೋಗಶೀಲತೆ, ವಿಶ್ಲೇಷಣೆ, ಅನ್ವಯಿಸುವಿಕೆ. ತೊಡಗಿಸುವಿಕೆ, ಬುದ್ಧಿವಂತಿಕೆ ಸಾಮರ್ಥ್ಯಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಲಾಗುತ್ತದೆ.

- ಹತ್ತನೇ ತರಗತಿಯ (ಎಸ್.ಎಸ್.ಎಲ್.ಸಿ) ಪರೀಕ್ಷೆಯು ಎಲ್ಲಾ ವಿದ್ಯಾರ್ಥಿಗಳಿಗೂ (ಆನ್‌ಲೈನ್ ಸ್ಕೂಲ್ ಮತ್ತು ಮನೆಕಲಿಕೆ (ಹೋಂ ಸ್ಕೂಲ್) ವಿದ್ಯಾರ್ಥಿಗಳು) ಅನ್ವಯಿಸುತ್ತದೆ.

- ಮೂಲವೇತನದೊಂದಿಗೆ ಪ್ರೋತ್ಸಾಹ ಧನ ಆಧಾರಿತ ಕಾರ್ಯಕ್ರಮಗಳನ್ನು ಪ್ರಾಥಮಿಕ ಹಾಗೂ ಪ್ರೌಢಶಾಲಾ ವಲಯಗಳಲ್ಲಿ ಜಾರಿಗೆ ತರಲಾಗುವುದು, ಶಿಕ್ಷಕರು/ ಶಿಕ್ಷಕರ ತಂಡವು ನಿರ್ದಿಷ್ಟಪಡಿಸಿದ ಪ್ರದೇಶಗಳ ಶಾಲೆಗಳನ್ನು ನಡೆಸುವ ಜವಾಬ್ದಾರಿಯನ್ನು ಸಂಪೂರ್ಣವಾಗಿ ಕೊಡಲಾಗುವುದು. ಕಾರ್ಯದಕ್ಷತೆಯ ಫಲಿತಾಂಶವನ್ನು ಸುಧಾರಿಸಲು ನಿರಂತರವಾಗಿ ಮೇಲ್ವಿಚಾರಣೆ ನಡೆಸುತ್ತಿರಲಾಗುತ್ತದೆ.

- ಶಿಕ್ಷಕರಿಗೆ ಭಡ್ತಿ ಹಾಗೂ ವೇತನ ಹೆಚ್ಚಳವನ್ನು ಭೋಧನಾ ಕ್ರಮಗಳ ರಿವರ್ಸ ಮೌಲ್ಯಮಾಪನದ (ವಿಧ್ಯಾರ್ಥಿಗಳು ಹಾಗೂ ಪೋಷಕರು ಅನಾಮಧೇಯವಾಗಿ ರೇಟಿಂಗ್ ಅಂಕಗಳನ್ನು ನೀಡುತ್ತಾರೆ) ಆಧಾರದ ಮೇಲೆ ನಿರ್ಧರಿಸಲಾಗುವುದು.

- ಹೊಸ ಶಿಕ್ಷಣ ವ್ಯವಸ್ಥೆಗಾಗಿ ತಂತ್ರಜ್ಞಾನ ಮತ್ತು ಭೋಧನಾ ವಿಧಾನವನ್ನು ಅಳವಡಿಸಿಕೊಳ್ಳಲು ಶಿಕ್ಷಕರಿಗೆ ಉತ್ತಮ ತರಬೇತಿ ಸರ್ಕಾರದ ವತಿಯಿಂದ ನೀಡಲಾಗುವುದು.

- ಎಸ್.ಎಸ್.ಎಲ್.ಸಿ (10ನೇ ತರಗತಿ) ನಂತರ ಅವಶ್ಯಕತೆಗಳ ಆಧಾರದ ಮೇಲೆ ಒಂದು ಅಥವಾ ಎರಡು ವರ್ಷಗಳ ಪೂರ್ವ ವೃತ್ತಿಪರ ಕೋರ್ಸ್ ಪಿ.ಪಿ.ಸಿ. (ಪ್ರೀ ಪ್ರೋಫೆಷನಲ್ ಕೋರ್ಸ್) ಪ್ರಾರಂಭಿಸಲಾಗುವುದು.

- ಮಾರುಕಟ್ಟೆಯ ಪ್ರಸ್ತುತ ಬೇಡಿಕೆ ಹಾಗೂ ನೂತನ ತಂತ್ರಜ್ಞಾನಗಳ ಮಟ್ಟದಲ್ಲಿ ಕೈಗಾರಿಕೆ ಹಾಗೂ ಉದ್ಯೋಗ ಆಧಾರಿತ ವೃತ್ತಿಪರ ಶಿಕ್ಷಣ ವ್ಯವಸ್ಥೆಯ ಪಿ.ಪಿ.ಸಿ. (ಪ್ರೀ ಪ್ರೋಫೆಷನಲ್ ಕೋರ್ಸ್) ಕೋರ್ಸುಗಳಿಗೆ ನೂತನ ತಂತ್ರಜ್ಞಾನಗಳ ಪಠ್ಯಕ್ರಮಗಳನ್ನು ರೂಪಿಸುವಲ್ಲಿ ಉದ್ಯಮಗಳು ಸಹ ಭಾಗವಹಿಸುತ್ತದೆ. ಪ್ರಾಯೋಗಿಕ ತರಬೇತಿಗಳೊಂದಿಗೆ ನಿರ್ಧಿಷ್ಟ ಉದ್ಯೋಗಗಳಿಗೆ ವಿಧ್ಯಾರ್ಥಿಗಳನ್ನು ಈ ವ್ಯವಸ್ಥೆಯು ಪೂರೈಸುತ್ತದೆ.

- ಅರ್ಹತೆ ಆಧರಿಸಿ ಮೀಸಲಾತಿ (Reserved for deserved): ಮೆಟ್ರಿಕ್ (10ನೇ ತರಗತಿ) ನಂತರ ಪ್ರತಿಶತದ(ಪರ್ಸಂಟೇಜ್) ಆಧಾರದ ಮೇಲೆ ಅತ್ಯುತ್ತಮವಾಗಿ ತೇರ್ಗಡೆಯಾದ 15% ವಿಧ್ಯಾರ್ಥಿಗಳಿಗೆ ಪಿ.ಯು.ಸಿ (ಪ್ರೀ ಯುನಿವರ್ಸಿಟಿ ಕೋರ್ಸ್) ಗಳಲ್ಲಿ ಮತ್ತು ಪಿ.ಪಿ.ಸಿ. (ಪ್ರೀ ಪ್ರೋಫೆಷನಲ್ ಕೋರ್ಸ್) ಗಳಲ್ಲಿ ಸರ್ಕಾರದ ವತಿಯಿಂದ ಸಂಪೂರ್ಣವಾಗಿ ಶಿಕ್ಷಣದ ಖರ್ಚುವೆಚ್ಚಗಳನ್ನು ನೀಡಲಾಗುವುದು.

- ಅರ್ಹತೆ ಆಧರಿಸಿ ಮೀಸಲಾತಿ (Reserved for deserved): ಸಿ.ಇ.ಟಿ, ನೀಟ್‌ನಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆ (ರ್‍ಯಾಂಕಿಂಗ್) ಆದ ಅತ್ಯುತ್ತಮ ವಿಧ್ಯಾರ್ಥಿಗಳಲ್ಲಿ ಇಂಜಿನಿಯರ್ ಕೋರ್ಸುಗಳಿಗೆ 15%, ವೈದ್ಯಕೀಯಕ್ಕೆ 30%, ಪದವಿ ಕೋರ್ಸುಗಳಿಗೆ 20% ವಿಧ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಸಂಪೂರ್ಣವಾಗಿ ಶಿಕ್ಷಣದ ಖರ್ಚುವೆಚ್ಚಗಳನ್ನು ನೀಡಲಾಗುವುದು.

- ಸ್ನಾತ್ತಕೊತ್ತರ, ಮಾಸ್ಟರ್ಸ್ ಮುಂತಾದ ಉನ್ನತ ಶಿಕ್ಷಣ ಅಧ್ಯಯನಗಳನ್ನು ಮುಂದುವರಿಸಲು ಮೆರಿಟ್ ಆಧಾರದ ಮೇಲೆ 10% ವಿಧ್ಯಾರ್ಥಿಗಳಿಗೆ ಉಚಿತ ಶಿಕ್ಷಣವನ್ನು ನೀಡಲಾಗುವುದು. ಉಚಿತ ಶಿಕ್ಷಣವನ್ನು ಪಡೆಯಲು ಕನಿಷ್ಠ 5 ವರ್ಷಗಳ ಕಾಲ ವೇತನದೊಂದಿಗೆ ಸರ್ಕಾರೀ ಸೇವೆ ಸಲ್ಲಿಸಲು ಬದ್ದತೆ(ಕಮಿಟ್‌ಮೆಂಟ್) ನೀಡಬೇಕಾಗುತ್ತದೆ. ಲಭ್ಯತೆಯ ಆಧಾರದ ಮೇಲೆ ಈ ಬದ್ದತೆಯನ್ನು(ಕಮಿಟ್‌ಮೆಂಟ್) ಅನ್ನು ಬಳಸಿಕೊಳ್ಳಲಾಗುವುದು.

- ಖಾಸಗೀ ಶಾಲೆಗಳು ಹಾಗೂ ಕಾಲೇಜುಗಳ ಹೆಚ್ಚುವರಿ ಶುಲ್ಕಗಳನ್ನು ನಿಯಂತ್ರಿಸಲು ಹೊಸ ನಿಯಮಗಳನ್ನು ಜಾರಿಗೆ ತರಲಾಗುವುದು (ಅಗತ್ಯಕ್ಕಿಂತ ಅತಿಯಾದ ಶುಲ್ಕವನ್ನು ವಿಧಿಸುವುದನ್ನು ನಿರ್ಭಂಧಿಸಲಾಗುವುದು). ಖಾಸಗೀ ಶಾಲೆಗಳು ಹಾಗೂ ಕಾಲೇಜುಗಳು ಒದಗಿಸುವ ಸೌಲಭ್ಯಗಳ ಆಧಾರದ ಮೇಲೆ ಪೋಷಕರಿಗೆ ಶುಲ್ಕವನ್ನು ವಿಧಿಸುವಂತೆ ಕಾನೂನು ತರಲಾಗುವುದು.

- ಡಿಪ್ಲೊಮೋ, ಐಟಿಐ, ಇಂಜಿನಿಯರಿಂಗ್, ಪದವಿ, ಸ್ನಾತ್ತಕೋತ್ತರ ಹಾಗೂ ಇತರ ಎಲ್ಲಾ ಕೋರ್ಸ್‌ಗಳ ವ್ಯಾಸಂಗದ ಅವಧಿ ಹಾಗು ಪಠ್ಯಕ್ರಮಗಳನ್ನು ಪ್ರಸ್ತುತ ತಂತ್ರಜ್ಞಾನ ಹಾಗೂ ಬೇಡಿಕೆಗಳ ಅನುಸಾರವಾಗಿ ಕಾಲ ಕಾಲಕ್ಕೆ ಪರಿಷ್ಕರಿಸಲಾಗುವುದು. (ಅಪ್‌ಗ್ರೇಡ್ ಮಾಡಲಾಗುವುದು)

- ಸೃಜನಶೀಲ ಕಲ್ಪನೆಗಳನ್ನು ನನಸಾಗಿಸಲು ಸರ್ಕಾರವು ವೇದಿಕೆಯನ್ನು ಕಲ್ಪಿಸುತ್ತದೆ. ಈ ವೇದಿಕೆಯ ಮೂಲಕ ಪೇಟೆಂಟ್ ಪಡೆಯುವುದರೊಂದಿಗೆ ಸಂಭಾವ್ಯ ಹೂಡಿಕೆದಾರರೊಂದಿಗೆ ಸಂಪರ್ಕ ಹೊಂದಲು ಪ್ರೋತ್ಸಾಹ ಸರ್ಕಾರವು ನೀಡುತ್ತದೆ.

- ಕನ್ನಡದಲ್ಲಿ ಎಲ್ಲಾ ವೃತ್ತಿಪರ ಶಿಕ್ಷಣವನ್ನು ಪಡೆಯಲು ಕೆಲವು ಇಂಗ್ಲೀಷ್ ಪದಗಳನ್ನು ಬಳಸಿಕೊಂಡು ಆಡುಭಾಷೆಯಲ್ಲಿಯೇ ಲಿಖಿತ ಪರೀಕ್ಷೆಗಳನ್ನು ಬರೆಯುವ ಮೂಲಕ ಇಂಜಿನಿಯರಿಂಗ್, ಮೆಡಿಕಲ್, ಡಿಪ್ಲೋಮೋ, ಪದವಿ ಹಾಗೂ ಇತರ ಎಲ್ಲಾ ಕೋರ್ಸುಗಳಲ್ಲಿ ಅವಕಾಶ ಮಾಡಿಕೊಡಲಾಗುತ್ತದೆ.

ನಿಮ್ಮೆಲ್ಲರ ಅನಿಸಿಕೆ–ಅಭಿಪ್ರಾಯ, ಸಲಹೆಗಳ ಆಧಾರದ ಮೇಲೆ ಪರಿಷ್ಕರಿಸಿ ಅಂತಿಮ ಪ್ರಣಾಳಿಕೆಯನ್ನು ಬಿಡುಗಡೆ ಮಾಡಲಾಗುವುದು.
ಇದೇ ರೀತಿ ಪ್ರಣಾಳಿಕೆಯ ಇನ್ನುಳಿದ ಭಾಗಗಳನ್ನು ನಿಮ್ಮ ಜೊತೆಗೆ ಸಧ್ಯದಲ್ಲೆ ಹಂಚಿಕೊಳ್ಳುತ್ತೇವೆ.
ಅಂತಿಮ ಅಧಿಕೃತ ಪ್ರಣಾಳಿಕೆಯ ಎಲ್ಲಾ ವಿಭಾಗಗಳೊಂದಿಗೆ ಶೀಘ್ರದಲ್ಲೇ ಬಿಡುಗಡೆ ಮಾಡುತ್ತೇವೆ
ನಾನು ಈ ವಿಚಾರವಾಗಿ ನಿಮ್ಮ ಜೊತೆ ನೇರ ಸಂಪರ್ಕ, ಚರ್ಚೆ ಮತ್ತು ವಿವರಣೆಗಾಗಿ ಲಭ್ಯವಿರುತ್ತೇನೆ.

**Yours Truly Upendra**

